## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ ನಂ. 1776/2025**

**ಸಿ.ಡಬ್ಲ್ಯೂ 10, ಪಿ.ಡಬ್ಲ್ಯೂ 06**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಉದಯ ಶನಿಯಾರ ನಾಯ್ಕ |
| **ತಂದೆಯ ಹೆಸರು** | : | ಶನಿಯಾರ ನಾಯ್ಕ |
| **ವಯಸ್ಸು** | : | 44 ವರ್ಷ |
| **ಉದ್ಯೋಗ** | : | ಕೂಲಿ |
| **ವಾಸ** | : | ಮುರ್ಡೇಶ್ವರ, ಭಟ್ಕಳ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 18-06-2026**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಗುರುತಿಸುತ್ತೇನೆ. ಚಾಸಾ-1 ನನ್ನ ಸ್ನೇಹಿತ. ಚಾಸಾ-8 ಮತ್ತು 9 ನನ್ನ ಪರಿಚಿತರು. ದಿ.26-06-2025 ರಂದು ನನ್ನ ಮಗನನ್ನು ಕೆಪಿ ಎಸ್ ಶಾಲೆಗೆ 3 ನೇ ತರಗತಿಗೆ ಅಡ್ಮಿಶನ್ ಮಾಡಲು ಕಾಯ್ಕಿಣಿ ಪಂಚಾಯತಿ ಕ್ರಾಸ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದೆನು. ಆಗ ಸಮಯ ಸುಮಾರು ಮಧ್ಯಾಹ್ನ 12.30 ಗಂಟೆಯಾಗಿತ್ತು. ವಯಸ್ಸಾದ ಮಹಿಳೆಯೊಬ್ಬರು ರಸ್ತೆಯನ್ನು ದಾಟಿ ಡಿವೈಡರ್ ಬಳಿ ಹೋಗುತ್ತಿದ್ದು ಆಗ ಮುರ್ಡೇಶ್ವರ ಕಡೆಯಿಂದ ಭಟ್ಕಳದ ಕಡೆಗೆ ಬಸ್ ನಂ. ಕೆಎ-31/ಎಫ್-1356 ಬಂದು ಮಹಿಳೆಗೆ ಢಿಕ್ಕಿಪಡಿಸಿದ್ದು ಅದರ ಪರಿಣಾಮ ಮಹಿಳೆಯ ತಲೆಗೆ ಮತ್ತು ಮೈಕೈಗೆ ಪೆಟ್ಟಾಗಿತ್ತು. ಆಟೋ ಚಾಲಕ ಶ್ರೀಧರ, ನಾನು ಮತ್ತು 3-4 ಜನರು ಮಹಿಳೆಯನ್ನು ಉಪಚರಿಸಿ ಆರ್.ಎನ್.ಎಸ್. ಆಸ್ಪತ್ರೆಗೆ ಆಟೋದಲ್ಲಿ ಕಳುಹಿಸಿರುತ್ತೇವೆ. ನೋಡಲಾಗಿ ಗಾಯಗೊಂಡ ಮಹಿಳೆಯು ಚಾಸಾ-1 ರವರ ತಾಯಿ ರಾಜೀವಿಯಾಗಿದ್ದರು. ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ. ರಾಜೀವಿಯವರು ಮೃತಪಟ್ಟಿದ್ದು, ಆ ಬಗ್ಗೆ ನಾನು ಮರುಹೇಳಿಕೆಯನ್ನು ನೀಡಿದ್ದೇನೆ. ಬಸ್ಸು ಯಾವ ರೀತಿಯಿಂದ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಎಪಿಪಿಯವರಿಂದಃ–**

ಅಪಘಾತವು ದಿ.26–05–2025 ರಂದು ನಡೆದಿದೆ ಎಂದರೆ ಸರಿ. ಬಸ್ಸು ಅತೀ ವೇಗ ಮತ್ತು ಅಜಾಗರೂಕತೆಯಿಂದ ಬಂದು ಮಹಿಳೆಗೆ ಢಿಕ್ಕಿಪಡಿಸಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಆಪಾದಿತ ಪರ ವಕೀಲರಿಂದಃ–**

ನಾನು 10 ತರಗತಿಯವರೆಗೆ ಓದಿರುತ್ತೇನೆ. ಅಪಘಾತವಾದ 2 ದಿನಗಳ ತರುವಾಯು ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡರು. ಬಸ್ ಚಾಲಕನ ತಪ್ಪಿನಿಂದ ಅಪಘಾತವಾಗಿದ ಎಂದು ನಾನು ಹೇಳಿಕೆ ನೀಡಿದ್ದೇನೆ. ಸದರಿ ರಸ್ತೆಯು ಉತ್ತರ–ದಕ್ಷಿಣಾಭಿಮುಖವಾಗಿದೆ. ಅಪಘಾತದ ಕಾಲಕ್ಕೆ ರಸ್ತೆಯು ಎರಡು ಪಥದಲ್ಲಿತ್ತು. ಮುರ್ಡೇಶ್ವರದಿಂದ ಬರುವ ವಾಹನಗಳು ಪೂರ್ವದ ಪಥದಿಂದ ಬರುತ್ತಿದ್ದವು ಎಂದರೆ ಸರಿ. ರಾಜೀವಿಯವರು ಪೂರ್ವದಿಂದ ಪಶ್ಚಿಮದ ಕಡೆಗೆ ರಸ್ತೆ ದಾಟುತ್ತಿದ್ದರು ಎಂದರೆ ಸರಿ. ರಾಜೀವಿಯವರು ಹಠಾತ್ತನೇ ರಸ್ತೆ ದಾಟಿದ ಕಾರಣದಿಂದ ಅಪಘಾತ ನಡೆದಿದೆ ಎಂದರೆ ಸಾಕ್ಷಿಯು ರಾಜೀವಿಯವರು ರಸ್ತೆಯನ್ನು ಮುಕ್ಕಾಲು ಭಾಗ ದಾಟಿದ್ದರು ಎಂದು ನುಡಿಯುತ್ತಾರೆ. ರಾಜೀವಿಯವರು ಬಸ್ ಬರುತ್ತಿರುವುದು ಗೊತ್ತಾಗದೇ ರಸ್ತೆ ದಾಟಿರುತ್ತಾರೆ. ನನ್ನ ಹೇಳಿಕೆಯಲ್ಲಿ ಅದೇ ರೀತಿ ಹೇಳಿರುತ್ತೇನೆ. ಅಪಘಾತದ ಸ್ಥಳದ ಬಳಿ ಬಸ್ ನಿಂತಿತ್ತು ಎಂದರೆ ಸರಿ. ಸಾಕ್ಷಿಯು ತದನಂತರ ಬಸ್ಸನ್ನು ರಸ್ತೆಯ ಬದಿಗೆ ತಂದು ನಿಲ್ಲಿಸಿದ್ದರು ಎಂದು ನುಡಿಯುತ್ತಾರೆ. ರಾಜೀವಿಯವರೊಂದಿಗೆ ರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ಅವರ ಮನೆಯವರು ಬೇರೆ ಯಾರೂ ಇರಲಿಲ್ಲ. ಅಪಘಾತವು ಕೆ.ಎಸ್.ಆರ್.ಟಿ.ಸಿ ಬಸ್ಸಿನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಮೃತರ ತಪ್ಪಿನಿಂದ ಅಪಘಾತ ನಡೆದಿದ್ದು, ಅವರ ಕುಟುಂಬದವರಿಗೆ ಪರಿಹಾರದ ಹಣ ತಪ್ಪಿ ಹೋಗುತ್ತದೆ ಎಂಬ ಕಾರಣಕ್ಕಾಗಿ ಬಸ್ ಚಾಲಕನ ತಪ್ಪಿನಿಂದ ಅಪಘಾತ ನಡೆದಿದೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಪೊಲೀಸರು ಅಪಘಾತದ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಮತ್ತು ನಾನು ಅವರಿಗೆ ಅಪಘಾತದ ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ ಹೇ ಕೇ ಸರಿ ಇದೆ.**

ಸಹಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**

**ಜೆ.ಎಂ.ಎಫ್.ಸಿ., ಭಟ್ಕಳ.**